ರೂಪಿಸಿರುವ ಮಾಡೆಲ್ ಬೇಕೋ?... ಅದಕ್ಕೆ ಮತ್ತೆ ಐದು ಸಾವಿರ ಡಾಲರ್ ಹೆಚ್ಚಿಗೆ ನೀಡಬೇಕಾಗುತ್ತದೆ.'

ಸೇಲ್ಸ್‌ಮನ್ ಮಾತು ಕೇಳಿದ್ದ ಮನುಗೆ ವಿಶೇಷ ರೊಬೊ ಬೇಕೆನಿಸಿತ್ತು. ವಿಶೇಷ ರೊಬೊಗೇ ಆರ್ಡರ್ ಮಾಡಿದ್ದ. ಬಹುಶಃ ಜೀವಮಾನವಿಡೀ ಅದರ ಉಪಯೋಗವಿರುತ್ತದೆ. ಅದು ಸಾಮಾನ್ಯ ಯಂತ್ರದಂತೆ ಇರಬಾರದು ಎನಿಸಿತ್ತು. ಅದಕ್ಕೆ ಈ ಹಣ ಹೆಚ್ಚೆನಿಸರಲಿಲ್ಲ.

'ನಿಮ್ಮ ಅಗತ್ಯಗಳನ್ನು ಪಟ್ಟಿ ಮಾಡಿ ಇ–ಮೇಲ್ ಮೂಲಕ ಕಳಿಸಿ' ಎನ್ನುತ್ತಾ ಆತ ಆರ್ಡರ್ ಕಾಪಿ ನೀಡಿದ್ದ.

ತನ್ನ ಅಪಾರ್ಟ್‌ಮೆಂಟಿಗೆ ಹಿಂತಿರುಗಿದ ತಕ್ಷಣ ಮನು ಹುಡುಕತೊಡಗಿದ್ದ! ತಾನು ಯುವಕನಾಗಿದ್ದಾಗ ತನ್ನನ್ನು ಆಕರ್ಷಿಸಿದ್ದ ಒಬ್ಬಳು ಅಜ್ಞಾತ ರೂಪಸಿಯನ್ನು! ಹೌದು, ಆಕೆ ಅವನ ಹೃದಯದಲ್ಲಿ ಶಾಶ್ವತವಾಗಿ ಉಳಿದಿದ್ದಳು! ಅವಳು ಯಾರೋ ಏನೋ ಗೊತ್ತಿಲ್ಲ! ಆಕೆ ಒಬ್ಬಳು ಪ್ರವಾಸಿ! ಮನು ತನ್ನ ಸ್ನೇಹಿತರ ಜೊತೆ ಪ್ರವಾಸಕ್ಕೆ ಹೋಗಿದ್ದಾಗ ಕಂಡವಳು. ಅವಳ ಚಿತ್ರವನ್ನು ತಾನೇ ಸ್ವತಃ ಬರೆದು, ನೂರಾರು ಬಾರಿ ತಿದ್ದಿ, ತೀಡಿ ತೃಪ್ತಿಯಾದಾಗ, ಅದನ್ನು ತನ್ನೊಂದಿಗೇ ಗೌಪ್ಯವಾಗಿಟ್ಟುಕೊಂಡಿದ್ದ. ಆ ಚಿತ್ರವನ್ನು ಸ್ಕ್ಯಾನ್ ಮಾಡಿ ರೊಬೊ ಕಂಪೆನಿಗೆ ಮೈಲ್ ಮಾಡಿದ್ದ. ಒಂದೇ ವಾರದಲ್ಲಿ ಬಂದಿತ್ತು ರೊಬೊ ಇದ್ದ ಬಾಕ್ಸುಗಳು, ವಿಶೇಷ ಕೊರಿಯರ್ ಮೂಲಕ.

ಆ ರೊಬೊ, ಅಲ್ಲಲ್ಲ ಕಮಲಾ, ಮುಟ್ಟಿದರೆ ನಲುಗುವಂತಿದ್ದಳು! ರೊಬೊ ಜೋಡಿಸುವ ಮುನ್ನ ಅದರ ಉಡುಪುಗಳ ಮೇಲೆ ಸಿಂಪಡಿಸಿದ್ದ ಅತಿ ದುಬಾರಿಯ ವಿಶೇಷ ಸುಗಂಧ ದ್ರವ್ಯ ಮತ್ತು ತರುವಂತಿತ್ತು. ದೇವ ಕನ್ನಿಕೆಯರಾದ ರಂಭಾ, ಮೇನಕೆಯರ ಜೊತೆಗಾತಿಯಂತಿದ್ದಳು. ಆ ದೇವ ಕನ್ನಿಕೆಯರ ಸೌಂದರ್ಯಕ್ಕೆ ಋಷಿಗಳೇ ಸಂಯಮ ಕಳೆದುಕೊಂಡರೆಂದು ಪುರಾಣಗಳು ಹೇಳುತ್ತವೆ! ಹಾಗಿರುವಾಗ ಸಾಮಾನ್ಯ ಮನುಷ್ಯನಾದ ತನ್ನದು ಯಾವ ಲೆಕ್ಕ? ಮನುವಿನ ಸಂಯಮ ಮೇಲೇರಲಾರದ ಗಾಳಿಪಟದಂತೆ ಲಾಗಾ ಹಾಕುತ್ತಿತ್ತು!

ತಂತ್ರಜ್ಞಾನ ಅತಿ ಎತ್ತರಕ್ಕೆ ಬೆಳೆದಂತೆ ಮಾನವ ಬ್ರಹ್ಮ ಸೃಷ್ಟಿಯನ್ನೇ ಮೀರಿಸಬಹುದು ಎನಿಸಿತ್ತು ಮನುಗೆ.

ರೊಬೊಗೆ ಮನೆಯ ಎಲ್ಲ ಭಾಗಗಳನ್ನೂ ತೋರಿಸಿದ ಮನು. ಆ ರೊಬೊ ಸಾಮೀಪ್ಯಕ್ಕೆ ಅವನು ಉದ್ವೇಗದಿಂದ ಕಂಪಿಸುತ್ತಿದ್ದ. ಭಾವನೆಗಳಿಂದ ಭಾರವಾದ ಮನಸ್ಸಿಗೆ ಯೋಚಿಸುವ ಶಕ್ತಿ ಇರಲಿಲ್ಲ. ತನಗೆ ಬೇಕಾದಂತಹ ರೊಬೊವೇನೋ ಬಂದಿದೆ! ಮುಂದೆ? ಅದನ್ನು ಹೇಗೆ ಬಳಸಿಕೊಳ್ಳಬೇಕು? ಸೇವಕಳಂತೆ? ಪರಿಚಾರಿಕೆಯಂತೆ?... ಇಲ್ಲ, ಪ್ರೇಮಿಯಂತೆ? ಪ್ರೇಮ?... ರೊಬೊ ಜೊತೆಗೆ ಪ್ರೇಮ?... ನಗು ಬಂತು! ನಕ್ಕ!

'ಏಕೆ ನಗುತ್ತಿದ್ದೀರಿ?...'

ಆಕೆ ಕೇಳಿದಾಗ ಅಚ್ಚರಿ!

'ಈ ಮಾಡೆಲ್ ರೊಬೊ ಸಾಮಾನ್ಯವಾದುದ್ದಲ್ಲ... ಇದು ಮಾನವರನ್ನೂ ಮೀರಿಸುವ ಸಾಧ್ಯತೆಯಿದೆ... ಅದಕ್ಕಾಗಿ ಟೆಸ್ಟಿಂಗ್ ನಡೆಯುತ್ತಿದೆ ನಮ್ಮ ಸಂಶೋಧನಾ ಕೇಂದ್ರದಲ್ಲಿ' ಎಂದು ಸೇಲ್ಸ್‌ಮನ್ ಹೇಳಿದ್ದು ನೆನಪಾಯಿತು.

ರೊಬೊಗೆ ಭಾವನೆಗಳಿರಲು ಸಾಧ್ಯವೆ?... ಅದು ಕೇವಲ ಯಂತ್ರ! ನೋಡಲು ಸುಂದರವಾಗಿದೆ ಅಷ್ಟೆ! ಇದು ಮಾನವರನ್ನೂ ಮೀರಿಸಲು ಸಾಧ್ಯವೆ? ಆ ಸೇಲ್ಸ್‌ಮನ್ ಇದನ್ನು